# ಕಾಡುಬಸಳೆ

## ಎಲೆಯಿಂದ ಗಿಡ ಹುಟ್ಟಿ...

**ಕಾಡುಬಸಳೆ ಒಂದು ಉತ್ತಮ ಸಸ್ಯ ಸಂಜೀವಿನಿ. ಇದನ್ನು ಹಲವು ರೀತಿಯಲ್ಲಿ ಔಷಧವಾಗಿ ಬಳಸಬಹುದು.**

■ ಯು. ಅನಂತ್



ನಾವು ಚಿಕ್ಕವರಿರುವಾಗ ಶಾಲೆಗೆ ಹೋಗಿ ನೋಟ್‌ಬುಕ್ ಪುಟಗಳ ಎಡೆಯಲ್ಲಿ ದಪ್ಪನೆಯ ಎಲೆಯನ್ನು ಇಡುತ್ತಿದ್ದೆವು. 'ಇದನ್ನು ಹೀಗೇ ಇಡಬೇಕು, ತೆರೆದು ನೋಡುವಂತಿಲ್ಲ. ಒಂದು ವಾರ ಕಳೆದ ಮೇಲೆ ಎಲೆ ಮರಿ ಹಾಕುತ್ತದೆ' ಎಂದು ಗೆಳತಿಯರು ಹೇಳುವಾಗ ಅಚ್ಚರಿಯಾಗುತ್ತಿತ್ತು. ಅಂತೆಯೇ ಆ ಎಲೆಯನ್ನು ಹಾಳೆಗಳ ಮಧ್ಯೆ ಇಟ್ಟು ವಾರವಾಗಲು ಕಾಯುತ್ತಿದ್ದೆವು. ನಮ್ಮ ಕೌತುಕಕ್ಕೆ ಅದು ಹಾಗೇ ಆಗುತ್ತಿತ್ತು, ವಾರ ಕಳೆದು ಪುಸ್ತಕ ತೆರೆದು ನೋಡಿದರೆ ಎಲೆಯ ಅಂಚಿನಲ್ಲಿ ಸಣ್ಣ ಸಣ್ಣ ಎಲೆಗಳು ಹುಟ್ಟಿದ್ದವು. ಈ 'ಎಲೆ ಅಚ್ಚರಿ'ಯನ್ನು ನೋಡುವುದೇ ಪುಳಕ ತರುತ್ತಿತ್ತು.

ಆಮೇಲೆ ತಿಳಿಯಿತು. ಇದು ಕಾಡುಬಸಳೆ ಗಿಡದ ಎಲೆ ಎಂದು. ಕಲಾಂಚೊ ಪಿನ್ನಾಟ (Kalanchoe pinnata) ಎಂಬ ವೈಜ್ಞಾನಿಕ ಹೆಸರನ್ನು ಹೊಂದಿರುವ ಕಾಡುಬಸಳೆ ಗಿಡ ದಪ್ಪನೆಯ ಎಲೆ ಹಾಗೂ ಮೃದು ಕಾಂಡವನ್ನು ಹೊಂದಿರುವ ಸಸ್ಯ. ಚೆನ್ನಾಗಿ ಬಲಿತ ಇದರ ಎಲೆಯನ್ನು ಕಿತ್ತು ತೇವವಿರುವ ನೆಲದ ಮೇಲಿಟ್ಟರೆ, ಇದರ ಅಂಚುಗಳಲ್ಲಿ ಬೇರು ಬಿಟ್ಟು ಚಿಕ್ಕ ಚಿಕ್ಕ ಗಿಡಗಳು ಹುಟ್ಟುತ್ತವೆ. ಇದೇ ತಂತ್ರವೇ ಪುಸ್ತಕದ ಮಧ್ಯೆ ಎಲೆ ಇಟ್ಟಾಗಲೂ ಆಗಿರುವುದು!

ಸಾಮಾನ್ಯ ಗಿಡಗಳಂತೆ ಇದಕ್ಕೆ ಹೂವು ಬಿಟ್ಟು ಪರಾಗಸ್ಪರ್ಶದ ಅವಶ್ಯಕತೆಯೇ ಇಲ್ಲ. ಈ ಬಗೆಯ ಗಿಡಗಳಿಗೆ asexual reproduction in plants ಎಂದು ಕರೆಯಲಾಗುತ್ತದೆ. ಈ ಎಲೆಗಳು ಅತಿ ಹೆಚ್ಚಿನ ಪೋಷಕಾಂಶಗಳನ್ನು, ಔಷಧೀಯ ಗುಣವನ್ನು ಹೊಂದಿರುತ್ತದೆ. ಹೀಗಾಗಿ ಆಯುರ್ವೇದದಲ್ಲಿ ಕಾಡುಬಸಳೆಗೆ ಹೆಚ್ಚಿನ ಮಹತ್ವವಿದೆ.

### ಸಸ್ಯ ಸಂಜೀವಿನಿ

ಕಾಡುಬಸಳೆ ಒಂದು ಉತ್ತಮ ಸಸ್ಯ ಸಂಜೀವಿನಿ. ಇದನ್ನು ಹಲವು ರೀತಿಯಲ್ಲಿ ಔಷಧವಾಗಿ ಬಳಸಬಹುದು.

'ಆಯುರ್ವೇದದಲ್ಲಿ ಇದನ್ನು ಹಲವು ಕಾಯಿಲೆಗಳಿಗೆ ಪರಿಣಾಮಕಾರಿಯಾಗಿ ಬಳಸಿಕೊಳ್ಳಲಾಗುತ್ತದೆ. ಗಾಯವಾದಾಗ ಇದರ ಎಲೆಯ ರಸ ಹಚ್ಚಿದರೆ ಗಾಯ ಬೇಗನೆ ವಾಸಿಯಾಗುತ್ತದೆ. ಅಲ್ಲದೆ ಇದು ಬ್ಯಾಕ್ಟೀರಿಯಾ ನಿರೋಧಕ, ಉರಿಯೂತ ನಿವಾರಕ, ವೈರಸ್ ನಿವಾರಕ ಮತ್ತು ಶಿಲೀಂಧ್ರ ನಿವಾರಕ ಗುಣಗಳನ್ನು ಹೊಂದಿದೆ' ಎಂದು ಹೇಳುತ್ತಾರೆ ಬೆಂಗಳೂರಿನ ಆಯುರ್ವೇದ ತಜ್ಞೆ ಡಾ. ವಸುಂಧರಾ ಭೂಪತಿ. ಅವರು ಈ ಗಿಡದ ಇನ್ನಷ್ಟು ಔಷಧೀಯ ಮೌಲ್ಯಗಳನ್ನು ಪಟ್ಟಿ ಮಾಡುತ್ತಾರೆ.

- ಚರ್ಮ ರೋಗ ನಿವಾರಣೆಗೆ ಕಾಡುಬಸಳೆ ದಿವ್ಯೌಷಧಿ. ಚರ್ಮದಲ್ಲಿ ಕಡಿತ ಅಥವಾ ತುರಿಕೆ, ಕೆಂಪಗಾಗಿರುವ ಚರ್ಮ ಮುಂತಾದ ತೊಂದರೆ ನಿವಾರಣೆಗೆ ಕಾಡುಬಸಳೆ ಎಲೆಯನ್ನು ಅರೆದು ತೊಂದರೆಗೊಳಗಾಗಿರುವ ಭಾಗಕ್ಕೆ ಹಚ್ಚಿದರೆ ಬೇಗನೆ ಉಪಶಮನ ಸಿಗುತ್ತದೆ.
- ಸುಟ್ಟ ಗಾಯಗಳಾಗಿದ್ದರೆ ಕಾಡುಬಸಳೆ ಎಲೆಯ ರಸ ಹಚ್ಚಿದರೆ ಉರಿ ಮಾಯವಾಗುತ್ತದೆ.
- ಸಾಮಾನ್ಯ ಕೆಮ್ಮು ಬಂದಾಗ ಈ ಗಿಡದ ಎಲೆಯ ರಸವನ್ನು ಜೇನುತುಪ್ಪದೊಂದಿಗೆ ಸೇರಿಸಿ ಬಳಸಿದರೆ ಕೆಮ್ಮು ನಿವಾರಣೆಯಾಗುತ್ತದೆ.
- ಮಂಡಿನೋವು, ಸಂಧಿವಾತ ಬಂದಾಗ ಈ ಎಲೆಯ ರಸವನ್ನು ಕೊಬ್ಬರಿ ಎಣ್ಣೆಯೊಂದಿಗೆ ಸೇರಿಸಿ ಬಿಸಿಮಾಡಿ ಹದವಾಗಿ ಮಸಾಜ್ ಮಾಡಿದರೆ ನೋವು ಕಡಿಮೆಯಾಗುತ್ತದೆ.
- ಕಾಡುಬಸಳೆ ಕಿಡ್ನಿಕಲ್ಲು ನಿವಾರಕ. ಕಾಡುಬಸಳೆ ಎಲೆಯ ರಸದೊಂದಿಗೆ ಸ್ವಲ್ಪ ಕಾಳುಮೆಣಸು ಪುಡಿ ಸೇರಿಸಿ ಚೆನ್ನಾಗಿ ಮಿಕ್ಸ್ ಮಾಡಿ ಖಾಲಿ ಹೊಟ್ಟೆಯಲ್ಲಿ ಸೇವಿಸುವುದರಿಂದ ಆರಂಭದ ಹಂತದಲ್ಲಿರುವ ಕಿಡ್ನಿಕಲ್ಲು ಸಮಸ್ಯೆ ನಿವಾರಣೆಯಾಗುತ್ತದೆ.

ಈ ಗಿಡದ ಇನ್ನಷ್ಟು ಔಷಧೀಯ ಪ್ರಯೋಜನದ ಬಗ್ಗೆ ಸಂಶೋಧನೆಗಳು ನಡೆಯುತ್ತಿವೆ. ಗರ್ಭಿಣಿಯರು ಈ ಎಲೆಯನ್ನು ಬಳಸದಿರುವುದೇ ಸೂಕ್ತ. ಯಾವುದೇ ಔಷಧಿಯನ್ನು ಸ್ವಯಂ ಆಗಿ ಮಾಡುವುದು ಒಳ್ಳೆಯದಲ್ಲ. ವೈದ್ಯರ ಸಲಹೆ ಮೇರೆಗೆ ಕಾಡುಬಸಳೆಯನ್ನು ಬಳಸುವುದು ಸೂಕ್ತ.

ಪ್ರತಿಕ್ರಿಯಿಸಿ: feedback@sudha.co.in

